ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 444

ಸದಸ್ಯರ ಹೆಸರು : ಶ್ರೀ ಘೋಟ್ನೇಕರ್ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 19-02-2018

ಉತ್ತರಿಸುವ ಸಚಿವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	2014-15 ರಿಂದ 2016-17ನೇ ಸಾಲಿನವರೆಗೆ ಕಾರವಾರ ಜಿಲ್ಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಯಾವ ಯಾವ ಕಾರ್ಯಕ್ರಮಗಳನ್ನು ಮಾಡಲಾಗಿದೆ; ಇದಕ್ಕೆ ಬಂದಿರುವ ಅನುದಾನ ಹಾಗೂ ಕಾರ್ಯಕ್ರಮ ಮಾಡಿರುವ ಸಂಘ-ಸಂಸ್ಥೆಗಳ ವಿವರ ನೀಡುವುದು; (ಜಿಲ್ಲಾವಾರು/ ತಾಲ್ಲೂಕುವಾರು)	2014-15 ರಿಂದ 2016-17ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾಡಿರುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರವನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ. ಸದರಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘ ಸಂಸ್ಥೆಗಳು ಮಾಡಿರುವುದಿಲ್ಲ.
ಆ)	ಸದರಿ ಇಲಾಖೆಯಿಂದ ನಡೆಸುವ ಕಾರ್ಯಕ್ರಮಗಳಿಗೆ ಇರುವ ಮಾನದಂಡವೇನು ?	ಸರ್ಕಾರದ ಮಾರ್ಗಸೂಚಿ ಆದೇಶ ಸಂಖ್ಯೆ ಕಸಂವಾ 340 ಕಸಧ 2015, ದಿ:18-9-2015ರನ್ವಯ ಮಾಡಲಾಗುತ್ತಿದೆ. (ಅನುಬಂಧ-2ರಲ್ಲಿ ಲಗತ್ತಿಸಿದೆ)

ಸಂಖ್ಯೆ: ಕಸಂವಾ 16 ಕವಿಸ 2018

(ಉಮಾಶ್ರೀ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 444ಕ್ಕೆ ಅನುಬಂಧ-1

(15)

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಾರವಾರ

2014-15ನೇ ಸಾಲಿನಲ್ಲಿ ಸಾಮಾನ್ಯಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನದ ಖರ್ಚುವೆಚ್ಚದ ವಿವರ

ಕ್ರ.ಸಂ	ಯೋಜನೆ/ಕಾರ್ಯಕ್ರಮದ ವಿವರ	ಲೆಕ್ಕ ಶೀರ್ಷಿಕೆ	ಬಿಡುಗಡೆಯಾದ ಅನುದಾನ	ಕಾರ್ಯಕ್ರಮ ಏರ್ಪಡಿಸಿದ ಸಂಖ್ಯೆ	ಖರ್ಚು	ಉಳಿಕೆ	ಷರಾ
1	ಸಾಂಸ್ಕೃತಿಕ ಸೌರಭ	2205-00-102-4-31-059(ಯೋಜನೆ)	7,40,000/-	10	3,50,000/-	3,90,000/-	
2.	ಯುವ ಸೌರಭ	2205-00-102-4-31-059(ಯೋಜನೆ)	6,50,000/-	21	6,47,000/-	3,000/-	
3.	ಚಿಗುರು	2205-00-102-4-31-059(ಯೋಜನೆ)	5,00,000/-	----	--	5,00,000/-	
4	ಸುಗ್ಗಿ-ಹುಗ್ಗಿ	2205-00-102-4-01-100(ಯೋಜನೆ)	5,00,000/-	17	5,00,000/-	----	

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಾರವಾರ

2014-15ನೇ ಸಾಲಿನಲ್ಲಿ ವಿಶೇಷ ಘಟಕ ಉಪಯೋಜನೆಯಡಿಯಲ್ಲಿ(ಪರಿಶಿಷ್ಠ ಜಾತಿ)ಗೆ ಬಿಡುಗಡೆಯಾದ ಅನುದಾನದ ಖರ್ಚುವೆಚ್ಚದ ವಿವರ

ಕ್ರ.ಸಂ	ಯೋಜನೆ/ಕಾರ್ಯಕ್ರಮದ ವಿವರ	ಲೆಕ್ಕ ಶೀರ್ಷಿಕೆ	ಬಿಡುಗಡೆಯಾದ ಅನುದಾನ	ಕಾರ್ಯಕ್ರಮ ಏರ್ಪಡಿಸಿದ ಸಂಖ್ಯೆ	ಖರ್ಚು	ಉಳಿಕೆ	ಷರಾ
1	ಜನಪದ ಉತ್ಸವ	2205-00-102-4-01-422(ಯೋಜನೆ)	5,00,000/-	19	5,00,000/-	----	
2	ಗುರು-ಶಿಷ್ಯ ಪರಂಪರೆ	2205-00-102-4-01-422(ಯೋಜನೆ)	47,500/-		42,000/-	5,500/-	

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಾರವಾರ

2014-15ನೇ ಸಾಲಿನಲ್ಲಿ ಗಿರಿಜನ ಉಪಯೋಜನೆಯಡಿಯಲ್ಲಿ(ಪರಿಶಿಷ್ಠ ಪಂಗಡ)ಕ್ಕೆ ಬಿಡುಗಡೆಯಾದ ಅನುದಾನದ ಖರ್ಚುವೆಚ್ಚದ ವಿವರ

ಕ್ರ.ಸಂ	ಯೋಜನೆ/ಕಾರ್ಯಕ್ರಮದ ವಿವರ	ಲೆಕ್ಕ ಶೀರ್ಷಿಕೆ	ಬಿಡುಗಡೆಯಾದ ಅನುದಾನ	ಕಾರ್ಯಕ್ರಮ ಏರ್ಪಡಿಸಿದ ಸಂಖ್ಯೆ	ಖರ್ಚು	ಉಳಿಕೆ	ಷರಾ
1	ಜನಪರ ಉತ್ಸವ	2205-00-796-0-01-423(ಯೋಜನೆ)	3,00,000/-	10	3,00,000/-	----	
2	ಗುರು-ಶಿಷ್ಯ ಪರಂಪರೆ	2205-00-796-0-01-423(ಯೋಜನೆ)	47,500/-		42,000/-	5,500/-	

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಾರವಾರ

2015-16ನೇ ಸಾಲಿನಲ್ಲಿ ಸಾಮಾನ್ಯ ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನದ ಖರ್ಚುವೆಚ್ಚದ ವಿವರ

ಕ್ರ.ಸಂ	ಯೋಜನೆ/ಕಾರ್ಯಕ್ರಮದ ವಿವರ	ಲೆಕ್ಕ ಶೀರ್ಷಿಕೆ	ಬಿಡುಗಡೆಯಾದ ಅನುದಾನ	ಕಾರ್ಯಕ್ರಮ ಏರ್ಪಡಿಸಿದ ಸಂಖ್ಯೆ	ಖರ್ಚು	ಉಳಿಕೆ	ಷರಾ
1	ಪ್ರಾಯೋಜಿತ ಕಾರ್ಯಕ್ರಮ	2205-00-102-4-01-015(ಯೋಜನೆ)	10,00,000/-	42	10,00,000/-	----	
2	ಸಾಂಸ್ಕೃತಿಕ ಸೌರಭ	2205-00-102-4-31-059(ಯೋಜನೆ)	3,25,000/-	09	3,24,279/-	721/-	
3	ಯುವ ಸೌರಭ	2205-00-102-4-31-059(ಯೋಜನೆ)	2,75,000/-	08	2,75,000/-	----	
4	ಚಿಗುರು	2205-00-102-4-31-059(ಯೋಜನೆ)	2,22,000/-	08	2,22,000/-	----	
5	ಸುಗ್ಗಿ-ಹುಗ್ಗಿ	2205-00-102-4-01-100(ಯೋಜನೆ)	5,00,000/-	21	4,99,503/-	497/-	

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಾರವಾರ

2015-16ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿಯಲ್ಲಿ(ಪರಿಶಿಷ್ಠ ಜಾತಿ)ಗೆ ಬಿಡುಗಡೆಯಾದ ಅನುದಾನದ ಖರ್ಚುವೆಚ್ಚದ ವಿವರ

ಕ್ರ.ಸಂ	ಯೋಜನೆ/ಕಾರ್ಯಕ್ರಮದ ವಿವರ	ಲೆಕ್ಕ ಶೀರ್ಷಿಕೆ	ಬಿಡುಗಡೆಯಾದ ಅನುದಾನ	ಕಾರ್ಯಕ್ರಮ ಏರ್ಪಡಿಸಿದ ಸಂಖ್ಯೆ	ಖರ್ಚು	ಉಳಿಕೆ	ಷರಾ
1	ಪ್ರಾಯೋಜನೆ ಕಾರ್ಯಕ್ರಮ	2205-00-102-1-44-422(ಯೋಜನೆ)	4,00,000/-	17	4,00,000/-	----	
2	ಜನಪರ ಉತ್ಸವ	2205-00-102-1-44-422(ಯೋಜನೆ)	5,00,000/-	12	5,00,000/-	----	
3	ಗುರು-ಶಿಷ್ಯ ಪರಂಪರೆ	2205-00-102-1-44-422(ಯೋಜನೆ)	1,00,000/-		1,00,000/-	----	

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಾರವಾರ

2015-16ನೇ ಸಾಲಿನಲ್ಲಿ ಗಿರಿಜನ ಉಪಯೋಜನೆಯಡಿಯಲ್ಲಿ(ಪರಿಶಿಷ್ಠ ಪಂಗಡ)ಕ್ಕೆ ಬಿಡುಗಡೆಯಾದ ಅನುದಾನದ ಖರ್ಚುವೆಚ್ಚದ ವಿವರ

ಕ್ರ.ಸಂ	ಯೋಜನೆ/ಕಾರ್ಯಕ್ರಮದ ವಿವರ	ಲೆಕ್ಕ ಶೀರ್ಷಿಕೆ	ಬಿಡುಗಡೆಯಾದ ಅನುದಾನ	ಕಾರ್ಯಕ್ರಮ ಏರ್ಪಡಿಸಿದ ಸಂಖ್ಯೆ	ಖರ್ಚು	ಉಳಿಕೆ	ಷರಾ
1	ಗಿರಿಜನ ಉಪಯೋಜನೆ	2205-00-796-0-01-423(ಯೋಜನೆ)	2,00,000/-	10	2,00,000/-	----	
2	ಗಿರಿಜನ ಉತ್ಸವ	2205-00-796-0-01-423(ಯೋಜನೆ)	5,00,000/-	19	4,99,000/-	1,000/-	
3	ಗುರು-ಶಿಷ್ಯ ಪರಂಪರೆ	2205-00-796-0-01-423(ಯೋಜನೆ)	1,00,000/-		1,00,000/-	----	

3

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಾರವಾರ.

2016-17ನೇ ಸಾಲಿನ ಸಾಮಾನ್ಯ ಯೋಜನೆಯಡಿ ಬಿಡುಗಡೆಯಾದ ಅನುದಾನದ ವಿವರ.

ಲೆಕ್ಕ ಶೀರ್ಷಿಕೆ	ಉದ್ದೇಶ	ಬಿಡುಗಡೆ ಮಾಡಿದ ಮೊತ್ತ	ವೆಚ್ಚವಾದ ಹಣ	ಉಳಿಕೆ ಮೊತ್ತ	ಷರಾ
2205-00-102-4-31-059 2205-00-102-4-31-059	ಸ್ಥಳೀಯ ಪ್ರಾಯೋಜಿತ 1 ಮತ್ತು 2ನೇ ಕಂತು	16,00,000=00	16,00,000=00	-------	
2205-00-102-1-68-059	ಸ್ಥಳೀಯ ಪ್ರಾಯೋಜಿತ 3ನೇ ಮತು 4ನೇ ಕಂತು	11,00,000=00	11,00,000=00	-------	
2205-00-102-4-31-059	ಸಾಂಸ್ಕೃತಿಕ ಸೌರಭ	3,25,000=00	3,24,000=00	1000=00	
2205-00-102-4-31-059	ಯುವ ಸೌರಭ	2,75,000=00	2,73,770=00	1230=00	
2205-00-102-4-31-059	ಚಿಗುರು	2,22,000=00	2,21,000=00	1000=00	
2205-00-102-4-01-100	ಕವಿಗೋಷ್ಠಿ	50,000=00	50,000=00	--------	
2205-00-102-4-01-100	ಸಾಧಕರೊಂದಿಗೆ ಸಂವಾದ	50,000=00	50,000=00	--------	
2205-00-001-0-01-059	ಕನ್ನಡ ರಾಜ್ಯೋತ್ಸವ ದಿನಾಚರಣೆ	1,00,000=00	1,00,000=00	-------	
2205-00-102-4-01-100	ಸುಗ್ಗಿ-ಹುಗ್ಗಿ	5,00,000=00	4,98,800=00	1200=00	
2205-00-102-4-01-059	ಸ್ವಾತಂತ್ರ್ಯೋತ್ಸವ	50,000=00	49,965=00	35=00	
2205-00-102-4-01-059	ಗಣರಾಜ್ಯೋತ್ಸವ	50,000=00	50,000=00	-----	

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಾರವಾರ

2016-17ನೇ ಸಾಲಿನ ವಿಶೇಷ ಘಟಕ ಯೋಜನೆ ಬಾಬಿನಡಿ ಬಿಡುಗಡೆಯಾದ ಅನುದಾನದ ವಿವರ.

ಲೆಕ್ಕ ಶೀರ್ಷಿಕೆ	ಉದ್ದೇಶ	ಬಿಡುಗಡೆ ಮಾಡಿದ ಮೊತ್ತ	ವೆಚ್ಚವಾದ ಹಣ	ಉಳಿಕೆ ಮೊತ್ತ	ಷರಾ
2205-00-102-1-44-422	ವಿಶೇಷ ಘಟಕ ಯೋಜನೆ ಪ್ರಾಯೋಜಿತ 1ನೇ ವಿಶೇಷ ಘಟಕ ಯೋಜನೆ ಪ್ರಾಯೋಜಿತ 2ನೇ ವಿಶೇಷ ಘಟಕ ಯೋಜನೆ ಪ್ರಾಯೋಜಿತ 3ನೇ	4,50,000=00 5,50,000=00 5,00,000=00	15,00,000=00	------	
2205-00-102-1-44-422	ಗುರುಶಿಷ್ಯ ಪರಂಪರೆ	1,50,000=00	80,000=00	70,000=00	
2205-00-102-1-44-422	ವಿಶೇಷ ಘಟಕ ಯೋಜನೆ ಜನಪರ ಉತ್ಸವ	5,00,000=00	4,98,850=00	1150=00	
2205-00-102-1-44-422	ಹಿರಿಯ ಕಲಾವಿದರ ಸಾಕ್ಷ್ಯಚಿತ್ರ	2,00,000=00	1,94,000=00	6000=00	
2205-00-800-0-15-422	ಚರ್ಮವಾದ್ಯ ತರಬೇತಿ	7,85,766=00	7,05,190=00	80,576=00	
2205-00-800-0-15-422	ವಿವಿದ ಕಲಾಪ್ರಕಾರಗಳ ತರಬೇತಿ	2,40,000=00	2,40,000=00	------	
	ಒಟ್ಟು ರೂ.	33,75,766=00			

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಾರವಾರ.

2016-17ನೇ ಸಾಲಿನ ಗಿರಿಜನ ಉಪಯೋಜನೆ ಬಾಬಿನಡಿ ಬಿಡುಗಡೆಯಾದ ಅನುದಾನದ ವಿವರ.

ಲೆಕ್ಕ ಶೀರ್ಷಿಕೆ	ಉದ್ದೇಶ	ಬಿಡುಗಡೆ ಮಾಡಿದ ಮೊತ್ತ	ವೆಚ್ಚವಾದ ಹಣ	ಉಳಿಕೆ ಮೊತ್ತ	ಷರಾ
2205-00-796-0-01-423	ಗಿರಿಜನ ಉಪಯೋಜನೆ ಪ್ರಾಯೋಜಿತ 1ನೇ ಗಿರಿಜನ ಉಪಯೋಜನೆ ಪ್ರಾಯೋಜಿತ 2ನೇ ಗಿರಿಜನ ಉಪಯೋಜನೆ ಪ್ರಾಯೋಜಿತ 3ನೇ	1,00,000=00 3,00,000=00 3,00,000=00	1,00,000=00 3,00,000=00 3,00,000=00	------ ------ ------	
2205-00-796-0-01-423	ಗುರುಶಿಷ್ಯ ಪರಂಪರೆ	2,00,000=00	1,20,000=00	80,000=00	
2205-00-796-0-01-423	ಗಿರಿಜನ ಉತ್ಸವ	6,00,000=00	5,99,870=00	130=00	
2205-00-796-0-01-423	ಹಿರಿಯ ಕಲಾವಿದರ ಸಾಕ್ಷ್ಯಚಿತ್ರ	5,00,000=00	4,98,800=00	1,200=00	
2205-00-800-0-15-423	ವಿವಿಧ ಕಲಾ ಪ್ರಕಾರಗಳ ತರಬೇತಿ	2,40,000=00	2,39,350=00	650=00	
	ಒಟ್ಟು ರೂ.	22,40,000=00			

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 4448 ಅನುಬಂಧ-2 (1)

<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ:
1. ದಿನಾಂಕ: 28-07-2014 ಕಸಂವಾ 611 ಕಸಧ 2014ರ ಸರ್ಕಾರಿ ಆದೇಶ.
2. ದಿನಾಂಕ: 02-12-2014 ಕಸಂವಾ 938 ಕಸಧ 2014ರ ಸರ್ಕಾರಿ ಆದೇಶ.
3. ದಿನಾಂಕ: 08-12-2014 ಕಸಂವಾ 14 ಕಗೌಧ 2014ರ ಸರ್ಕಾರಿ ಆದೇಶ.
4. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆರವರ ಪತ್ರ ದಿನಾಂಕ:21.05.2015.

<u>ಪ್ರಸ್ತಾವನೆ:</u>

ಮೇಲೆ ಓದಲಾದ ಕ್ರಮಸಂಖ್ಯೆ (1, 2 ಮತ್ತು 3)ರ ಆದೇಶಗಳಲ್ಲಿ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ, ಮಾರ್ಗಸೂಚಿಗಳನ್ನು ಹೊರಡಿಸಿ ಆದೇಶ ರೂಪಿಸಲಾಗಿರುತ್ತದೆ.

2. ಮೇಲೆ ಓದಲಾದ ಕ್ರಮಸಂಖ್ಯೆ (4)ರ ಪತ್ರದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವರು ಈಗಾಗಲೇ ಹೊರಡಿಸಿರುವ ಮಾರ್ಗಸೂಚಿಗಳನ್ನು ಪರಿಷ್ಕರಿಸಿ. ಈ ಕೆಳಕಂಡ ವಿವಿಧ ಯೋಜನೆಗಳಿಗೆ ಪರಿಷ್ಕೃತ/ ಹೊಸ ಮಾರ್ಗಸೂಚಿಗಳ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

1. ಸಂಘ-ಸಂಸ್ಥೆಗಳಿಗೆ ಧನಸಹಾಯ.
2. ಸಂಘ-ಸಂಸ್ಥೆಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಾಯೋಜನೆ.
3. ಸಾಂಸ್ಕೃತಿಕ ಭವನ/ ರಂಗಮಂದಿರಗಳ ನಿರ್ಮಾಣಕ್ಕೆ ಅನುದಾನ/ಧನಸಹಾಯ.
4. ವಾರ್ಷಿಕ ಪ್ರಶಸ್ತಿಗಳು (ಸಾಹಿತ್ಯ ಸಂಸ್ಕೃತಿ ವಿಭಾಗ, ಸಂಗೀತ ನೃತ್ಯ ವಿಭಾಗ, ರಂಗಭೂಮಿ ವಿಭಾಗ, ಲಲಿತಕಲಾ ವಿಭಾಗ).
5. ಜಯಂತಿಗಳು.
6. ಜಿಲ್ಲಾ ಉತ್ಸವಗಳು.
7. ಪ್ರಕಟಿತ ಗ್ರಂಥಗಳಿಗೆ ಧನಸಹಾಯ.
8. ಪಿಹೆಚ್‌ಡಿ ಸಂಶೋಧನಾ ಪ್ರಬಂಧಗಳ ಹಸ್ತಪ್ರತಿ ಮುದ್ರಣಕ್ಕೆ ಧನಸಹಾಯ.
9. ಎಂಫಿಲ್ ಪ್ರೌಢ ಪ್ರಬಂಧಗಳ ಹಸ್ತಪ್ರತಿ ಮುದ್ರಣಕ್ಕೆ ಧನಸಹಾಯ.
10. ಕಷ್ಟಪರಿಸ್ಥಿತಿಯಲ್ಲಿರುವ ಸಾಹಿತಿ/ಕಲಾವಿದರಿಗೆ ಮಾಸಾಶನ ಮಂಜೂರಾತಿ.
11. ಕನ್ನಡ ಬಾರದವರಿಗೆ ಕನ್ನಡ ಕಲಿಸುವ ಯೋಜನೆ.
12. ಜನಪದ ಪ್ರದರ್ಶನ ಕಲೆಗಳಲ್ಲಿ ಮಹಿಳೆಯರಿಗೆ ತರಬೇತಿ ಕಾರ್ಯಗಾರ ಹಾಗೂ ತಂಡಗಳ ಸಿದ್ಧತೆ.

2) ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಕಸಂವಾ 340 ಕಸಧ 2015, ಬೆಂಗಳೂರು, ದಿನಾಂಕ: 18-09-2015</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ, ಇಲಾಖೆಯು ಅನುಸರಿಸಬೇಕಾದ <u>ಅನುಬಂಧ 1 ರಿಂದ 12</u> ರವರೆಗಿನ ಮಾರ್ಗಸೂಚಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹೊರಡಿಸಲಾಗಿದೆ.

ಮೇಲೆ ಓದಲಾದ ಕ್ರಮಸಂಖ್ಯೆ 1 ರಿಂದ 3 ರವರೆಗಿನ ಆದೇಶಗಳಲ್ಲಿ ಹೊರಡಿಸಲಾದ ಮಾರ್ಗಸೂಚಿಗಳನ್ನು ನಿರಸನಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಲ್ಲಿಕಾರ್ಜುನ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ.

ಗೆ:

1. ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.
2. ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲಾ ಸಹಾಯಕ ನಿರ್ದೇಶಕರುಗಳಿಗೆ (ನಿರ್ದೇಶಕರ ಮುಖಾಂತರ).
4. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಸಹಾಯಕರು/ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು/ ಅಧೀನ ಕಾರ್ಯದರ್ಶಿಗಳು, ಸಮನ್ವಯ ಶಾಖೆ, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ: ಕಸಂವಾ 340 ಕಸಧ 2015, ಬೆಂಗಳೂರು, ದಿನಾಂಕ: 18-09-2015

ಅನುಬಂಧ – 2

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸಂಘ-ಸಂಸ್ಥೆಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಾಯೋಜಿಸಲು ಅನುಸರಿಸಬೇಕಾದ ಮಾರ್ಗಸೂಚಿ

1. ಸಂಘ-ಸಂಸ್ಥೆಗಳು ಪ್ರಾಯೋಜಿತ ಕಾರ್ಯಕ್ರಮಗಳ ಕೋರಿಕೆಗೆ 'ಸಕಾಲ'ದಲ್ಲಿ ನಿಗದಿತ ನಮೂನೆ ಅರ್ಜಿಯನ್ನು ಕನಿಷ್ಠ ಹದಿನೈದು ದಿನಗಳ ಮುಂಚಿತವಾಗಿ ಪೂರ್ಣ ವಿವರ ಹಾಗೂ ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಬೇಕು. ಅಪೂರ್ಣ ಮಾಹಿತಿಯ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಈ ರೀತಿ ಸ್ವೀಕರಿಸಿದ ಅರ್ಜಿಗಳ ಅರ್ಹತೆ ಗುರುತಿಸಿ ಕಲಾತಂಡಗಳ ಪ್ರಾಯೋಜನೆಗೆ ಉಪಕ್ರಮಿಸಲಾಗುವುದು.

2. ಪ್ರಾಯೋಜನೆ ಕೋರಿಕೆ ಅರ್ಜಿಯನ್ನು ಸಂಬಂಧಿಸಿದ ಜಿಲ್ಲೆಯ ಸಹಾಯಕ ನಿರ್ದೇಶಕರ ಕಛೇರಿಗೆ ಸಲ್ಲಿಸಬೇಕು.

3. ಪ್ರಾಯೋಜಕತ್ವವನ್ನು ಕೋರುವ ಸಂಸ್ಥೆಗಳು ಕಲಾಪ್ರಕಾರವನ್ನು ಮಾತ್ರ ಕೋರಬಹುದೇ ಹೊರತು ನಿರ್ದಿಷ್ಟ ಕಲಾತಂಡಗಳನ್ನು ಕೋರುವಂತಿಲ್ಲ. ಜಿಲ್ಲೆಯಲ್ಲಿ ಅಥವಾ ಅಕ್ಕಪಕ್ಕದ ಜಿಲ್ಲೆಯಲ್ಲಿ ಇರುವ ಕಲಾತಂಡಗಳನ್ನು ರೋಟೇಷನ್ ಮೇಲೆ ಹಂಚಿಕೆ ಮಾಡಲಾಗುವುದು.

4. ಅರ್ಜಿ ಸಲ್ಲಿಕೆಯಾರ ಮಾತ್ರಕ್ಕೆ ಪ್ರಾಯೋಜಕತ್ವ ಕಡ್ಡಾಯವಲ್ಲ. ಇಲಾಖೆಯಿಂದ ಪ್ರಾಯೋಜಕತ್ವ ನೀಡಿದೆ ಎಂಬ ಲಿಖಿತ ಆದೇಶವಾಗಬೇಕು. ಕಲಾವಿದ/ಕಲಾತಂಡಗಳನ್ನು ಇಲಾಖೆಯೇ ನಿರ್ಧರಿಸಿ ನಿಗದಿ ಮಾಡುತ್ತದೆ. ಈ ರೀತಿ ನಿಗದಿ ಮಾಡಿದ ಕಲಾತಂಡಗಳಿಗೆ ಮಾತ್ರ ಇಲಾಖೆಯಿಂದ ಪ್ರಾಯೋಜನೆಯ ಮೊತ್ತ ನೀಡಲಾಗುವುದು.

5. ಧನಸಹಾಯ ಪಡೆದ/ಪಡೆಯುವ ಸಂಘ-ಸಂಸ್ಥೆಗಳು ಸಂಘಟಿಸುವ ಕಾರ್ಯಕ್ರಮಗಳಿಗೆ ಪ್ರಾಯೋಜನೆ ಮಾಡಲಾಗುವುದಿಲ್ಲ.

6. ರಾಜ್ಯದ ದೂರದ ಜಿಲ್ಲೆಯಲ್ಲಿರುವ ತಂಡ ಬೇಕಾದಲ್ಲಿ ಸಂಸ್ಥೆಯವರ ವೆಚ್ಚದಿಂದಲೇ ಪಡೆದುಕೊಳ್ಳಬಹುದು. ಇಂತಹ ಕಾರ್ಯಕ್ರಮಗಳನ್ನು ಇಲಾಖೆಯಿಂದ ಪ್ರಾಯೋಜನೆ ಮಾಡಲಾಗುವುದಿಲ್ಲ.

7. ಪ್ರಾಯೋಜನೆ ಪಡೆಯುವ ಯಾವುದೇ ಸಂಸ್ಥೆಗೆ ಸಕಾಲ ವ್ಯಾಪ್ತಿಯಲ್ಲಿ ಒಂದು ವರುಷದಲ್ಲಿ ಗರಿಷ್ಠ ಎರಡು ಸಲ ಕಲಾತಂಡ/ಕಾರ್ಯಕ್ರಮಗಳನ್ನು ಪ್ರಾಯೋಜಿಸಲಾಗುವುದು.

8. ರಾಷ್ಟ್ರೀಯ ಹಬ್ಬಗಳಾದ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯ ದಿನಾಚರಣೆ, ಕನ್ನಡ ರಾಜ್ಯೋತ್ಸವ ಆಚರಣೆಯಂತಹ ಕಾರ್ಯಕ್ರಮಗಳಿಗೆ ಪ್ರಾಯೋಜಿತ ಕಾರ್ಯಕ್ರಮಗಳನ್ನು ನೀಡಲಾಗುವುದಿಲ್ಲ.

9. ಇಲಾಖೆಯಿಂದ ಲಿಖಿತ ಆದೇಶ ಇಲ್ಲದೆ ನಡೆಸಿರುವ ಯಾವುದೇ ಕಾರ್ಯಕ್ರಮ ಪ್ರಾಯೋಜನೆಗೆ ಅರ್ಹವಾಗುವುದಿಲ್ಲ. ಮುಂಚಿತವಾಗಿ ಇಲಾಖೆಯ ಆದೇಶ ಪಡೆಯದೆ ಕಾರ್ಯಕ್ರಮ ನಡೆಸಿದ ಯಾವುದೇ ಕಾರ್ಯಕ್ರಮಗಳಿಗೆ ಘಟನೋತ್ತರ ಮಂಜೂರಾತಿ ನೀಡಲಾಗುವುದಿಲ್ಲ.

10. ಪ್ರಾಯೋಜನೆ ಕೋರುವವರು ಕಲಾತಂಡಗಳಾಗಿದ್ದು ತಾವೇ ಕಾರ್ಯಕ್ರಮ ನೀಡಲು ಕೋರಿದಲ್ಲಿ ಪ್ರಾಯೋಜನೆಗೆ ಅವಕಾಶವಿರುವುದಿಲ್ಲ. ಕಲಾವಿದ/ಕಲಾತಂಡ ಸಂಘ-ಸಂಸ್ಥೆಗಳು ತಾವೇ ಸ್ವತಃ ನೇರವಾಗಿ ಪ್ರಾಯೋಜನೆ ಕೋರುವಂತಿಲ್ಲ. ಆದರೆ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಮತ್ತು ಜಾನಪದ ನಾಟಕಗಳ ಅಸಂಘಟಿತ ತಂಡಗಳು ತಾವೇ ಕಾರ್ಯಕ್ರಮಗಳನ್ನು ಏರ್ಪಡಿಸಿ ಪ್ರದರ್ಶನ ಮಾಡಲು ಬಯಸಿದಲ್ಲಿ ಅಂತಹ ತಂಡಗಳ ಮನವಿಗಳನ್ನು ಪ್ರಾಯೋಜನೆಗೆ ಪರಿಗಣಿಸಲಾಗುವುದು.

...2/-

11. ರವೀಂದ್ರ ಕಲಾಕ್ಷೇತ್ರ ಮತ್ತು ನಯನ ಸಭಾಂಗಣ ಹಾಗೂ ಜಿಲ್ಲಾ ರಂಗಮಂದಿರಗಳಲ್ಲಿ ಆಯೋಜಿಸುವ ಯಾವುದೇ ಕಾರ್ಯಕ್ರಮಗಳಿಗೆ ವೇದಿಕೆಯ ಕಾರ್ಯಕ್ರಮಗಳನ್ನು ಮಾತ್ರ ಪ್ರಾಯೋಜನೆಗೆ ಪರಿಗಣಿಸಲಾಗುವುದು.

12. ಮಂಜೂರಾತಿ ಪಡೆದ ಸಂಸ್ಥೆಯು ಅರ್ಜಿಯಲ್ಲಿ ತಿಳಿಸಿರುವ ಕಾರ್ಯಕ್ರಮಗಳನ್ನೆ ನಡೆಸಬೇಕು. ಕಾರ್ಯಕ್ರಮದ ಆಹ್ವಾನಪತ್ರಿಕೆ, ಬ್ಯಾನರ್‌ನಲ್ಲಿ ಇಲಾಖೆಯ ಸಹಕಾರವನ್ನು ಸ್ಮರಿಸಬೇಕು. ಕಾರ್ಯಕ್ರಮ ಮುಗಿದ ಹತ್ತು ದಿನಗಳೊಳಗಾಗಿ ಕಾರ್ಯಕ್ರಮ ನಡೆದ ಬಗ್ಗೆ ವರದಿಯನ್ನು ಸಹಾಯಕ ನಿರ್ದೇಶಕರ ದೃಢೀಕರಣ ಪತ್ರದೊಂದಿಗೆ ಕಾರ್ಯಕ್ರಮದ ವರದಿ, ಛಾಯಚಿತ್ರಗಳು, ಆಮಂತ್ರಣ ಪತ್ರಿಕೆ, ಪತ್ರಿಕಾ ತುಣುಕುಗಳು ಮುಂತಾದ ಧೃಡೀಕೃತ ದಾಖಲೆಗಳನ್ನು ಒದಗಿಸಬೇಕು.

13. ಪ್ರಾಯೋಜನೆ ಪಡೆದ ಸಂಘ-ಸಂಸ್ಥೆಗಳು ತಮ್ಮ ಸಂಸ್ಥೆಯ ವತಿಯಿಂದ ಕಲಾವಿದರಿಗೆ ಸ್ಥಳೀಯ ಆತಿಥ್ಯದ ವ್ಯವಸ್ಥೆಯನ್ನು ಹಾಗೂ ಗೌರವದಿಂದ ನಡೆಸಿಕೊಳ್ಳುವ ಷರತ್ತಿಗೆ ಒಳಪಟ್ಟಿರಬೇಕು.

14. ಪ್ರಾಯೋಜನೆ ಪಡೆದ ಸಂಸ್ಥೆಯು ಪ್ರಾಯೋಜಿತ ಕಾರ್‍ಕ್ರಮ ನಡೆದ ಗರಿಷ್ಠ ಹದಿನೈದು ದಿನಗಳ ಒಳಗಾಗಿ ನಿಗದಿತ ನಮೂನೆಯಲ್ಲಿ ವರದಿಯನ್ನು ಸಲ್ಲಿಸಲು ಬಾಧ್ಯರಾಗಿರಬೇಕು

15. ಪ್ರಾಯೋಜಿತ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ಉಲ್ಲಂಘಿಸುವ ಸಂಘ-ಸಂಸ್ಥೆಗಳಿಗೆ ಕನಿಷ್ಟ ಎರಡು ವರ್ಷಗಳ ಕಾಲ ಯಾವುದೇ ಪ್ರಾಯೋಜನ ನೀಡಲಾಗುವುದಿಲ್ಲ.

16. ಕಲಾತಂಡಗಳು ತಂಡದಲ್ಲಿರುವ (ಆ ದಿನದ ಕಾರ್ಯಕ್ರಮದಲ್ಲಿ ಪ್ರದರ್ಶನ ನೀಡಿದ)ಎಲ್ಲಾ ಕಲಾವಿದರ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ಮೊಬೈಲ್ ಸಂಖ್ಯೆ, ಹಣಸಂದಾಯ ರಸೀತಿ, ಬ್ಯಾಂಕ್ ಖಾತೆ ವಿವರಗಳನ್ನು ನಿಗದಿತ ನಮೂನೆಯಲ್ಲಿ ಸಹಾಯಕ ನಿರ್ದೇಶಕರ ಮೂಲಕ ಸಲ್ಲಿಸಬೇಕು.

17. ಜಾನಪದ ಕಲಾತಂಡಗಳಲ್ಲಿರುವ ಎಲ್ಲಾ ಕಲಾವಿದರಿಗೆ ಆರ್.ಟಿ.ಜಿ.ಎಸ್. ಮೂಲಕ ಬ್ಯಾಂಕ್ ಖಾತೆಗೆ ಕಾರ್ಯಕ್ರಮದ ಸಂಭಾವನೆ ಪಾವತಿಸಲಾಗುವುದು. ತಂಡಗಳಿಗೆ ನಿಗದಿ ಪಡಿಸಿರುವ ಸಂಭಾವನೆಯಲ್ಲಿ ಶೇ.20 ರಷ್ಟು ಸಂಭಾವನೆಯನ್ನು ತಂಡದ ಮುಖ್ಯಸ್ಥರಿಗೆ ಸಂಘಟನಾ ವೆಚ್ಚವೆಂದು ನೀಡಲಾಗುವುದು. ಉಳಿಕೆ ಹಣವನ್ನು ಕಾರ್ಯಕ್ರಮ ನೀಡಿದ ಎಲ್ಲಾ ಕಲಾವಿದರಿಗೆ ಸಮಾನವಾಗಿ ಹಂಚಿಕೆ ಮಾಡಲಾಗುವುದು. ಉಳಿದ ಕಲಾಪ್ರಕಾರಗಳ ತಂಡಗಳ ನಿಗದಿತ ಸಂಭಾವನೆಯನ್ನು ಆಯಾ ತಂಡಗಳ ಮುಖ್ಯಸ್ಥರಿಗೆ ಆರ್.ಟಿ.ಜಿ.ಎಸ್ ಮೂಲಕ ಪಾವತಿಸಲಾಗುವುದು.

18. ಪ್ರಾಯೋಜನೆ ಪಡೆದ ಸಂಸ್ಥೆಯು ಒಂದು ವಾರದಲ್ಲಿ ವರದಿಯನ್ನು ಸಹಾಯಕ ನಿರ್ದೇಶಕರಿಗೆ ಸಲ್ಲಿಸಬೇಕು. ಸಮರ್ಪಕ ಮಾಹಿತಿಯನ್ನು ಪಡೆದು, ಸಹಾಯಕ ನಿರ್ದೇಶಕರು ವರದಿಯನ್ನು ಪರಿಶೀಲಿಸಿ ಹದಿನೈದು ದಿನಗಳ ಒಳಗಾಗಿ ಕಲಾವಿದರಿಗೆ ಸಂಭಾವನೆ ಪಾವತಿಗೆ ಕ್ರಮ ವಹಿಸಬೇಕು.

19. ಸಹಾಯಕ ನಿರ್ದೇಶಕರು ಕಾರ್ಯಕ್ರಮದ ಉದ್ದೇಶಕ್ಕನುಗುಣವಾಗಿ ಎಲ್ಲಾ ಕಲಾಪ್ರಕಾರಗಳ ತಂಡಗಳಿಗೂ ಅವಕಾಶ ದೊರೆಯುವಂತೆ ಪ್ರಾಯೋಜಿಸುವುದು. ಜಿಲ್ಲಾ ಹಂತದಲ್ಲಿ ಪ್ರತಿ ತಿಂಗಳೂ ನಿಗದಿ ಪಡಿಸಿದ ಗರಿಷ್ಠ ಮಿತಿಯನ್ನು ಮೀರದಂತೆ ಸಂಘ-ಸಂಸ್ಥೆಗಳ ಮನವಿಗಳನ್ನು ಆದ್ಯತೆಯ ಮೇರೆಗೆ ಪರಿಗಣಿಸಿ ಪ್ರಾಯೋಜನೆ ನೀಡಬೇಕು

20. ವಿವಿಧ ಕಲಾಪ್ರಕಾರಗಳ ಸಂಭಾವನೆ ಈ ಕೆಳಕಂಡಂತೆ ನಿಗದಿ ಪಡಿಸಿದೆ.

ಅ) ಏಕವ್ಯಕ್ತಿ ನೃತ್ಯ(ರೆಕಾರ್ಡೆಡ್ ಮ್ಯೂಸಿಕ್)	- 7,000/-
ಆ) ಏಕವ್ಯಕ್ತಿ ನೃತ್ಯ-ಪಕ್ಕ ವಾದ್ಯಗಳೊಂದಿಗೆ	- 10,000/-
ಇ) ಗಮಕ, ಕಥಾ ಕೀರ್ತನ ಇತ್ಯಾದಿ ಕಾರ್ಯಕ್ರಮಗಳಿಗೆ	- 10,000/-
ಈ) ಯುಗಳ ನೃತ್ಯ/ಸಮೂಹ ಮಕ್ಕಳ ನೃತ್ಯ ಕಾರ್ಯಕ್ರಮ (ರೆಕಾರ್ಡೆಡ್)	- 12,000/-
ಉ) ಯುಗಳ ನೃತ್ಯ/ಸಮೂಹ ಮಕ್ಕಳ ನೃತ್ಯ ಕಾರ್ಯಕ್ರಮ (ಪಕ್ಕವಾದ್ಯಗಳೊಂದಿಗೆ)	- 15,000/-
ಊ) ಶಾಸ್ತ್ರೀಯ ಸಂಗೀತ-ಹಿಂದೂಸ್ತಾನಿ, ಕರ್ನಾಟಕ (ಗಾಯನ/ವಾದ್ಯ ಸಂಗೀತ)	- 15,000/-
ಋ) ಜನಪದ ಗಾಯನ	- 15,000/-
ಎ) ಸುಗಮ ಸಂಗೀತ	- 20,000/-
ಏ) ಜನಪದ ಕಲಾತಂಡ ಪ್ರಕಾರಗಳು(ಕನಿಷ್ಠ 8 ಜನರ ತಂಡ)	- 20,000/-
ಐ) ಬಯಲಾಟ/ಗೊಂಬೆಯಾಟ/ಸಾಮಾಜಿಕ ನಾಟಕ	- 25,000/-
ಒ) ಸಮೂಹ ನೃತ್ಯ /ನೃತ್ಯರೂಪಕ/ಯಕ್ಷಗಾನ/ ಐತಿಹಾಸಿಕ/ಪೌರಾಣಿಕ ನಾಟಕ	- 30,000/-

ಹೊರ ರಾಜ್ಯಗಳಲ್ಲಿ ಪ್ರಾಯೋಜಿಸಿದ ಕಾರ್ಯಕ್ರಮಗಳ ಸಂಭಾವನೆ ಪಾವತಿಸುವಾಗ ಕ್ರಸಂ.20ರಲ್ಲಿ ನಮೂದಿಸಿದ ಒಂದೂವರೆ ಪಟ್ಟು ಸಂಭಾವನೆ ಪಾವತಿಸಲಾಗುವುದು.

21.ಕಲಾವಿದರ ವಾಸಸ್ಥಳದಿಂದ ಕನಿಷ್ಠ 500 ಕಿಲೋಮೀಟರ್ ಮತ್ತು ಹೆಚ್ಚು ದೂರದ ಹೊರ ರಾಜ್ಯಗಳ ಪ್ರದೇಶದಲ್ಲಿ ಪ್ರಾಯೋಜಿಸುವ ತಂಡಗಳಿಗೆ ಮಾತ್ರ 2ನೆ ದರ್ಜೆ ರೈಲು ಪ್ರಯಾಣದರ/ ಸಾಮಾನ್ಯ ಬಸ್ ಪ್ರಯಾಣದರ ನೀಡಲಾಗುವುದು.

22. ಗ್ರಾಮೀಣ ಮಟ್ಟದ ಕಾರ್ಯಕ್ರಮಗಳಿಗೆ ಒಂದು ಕಲಾತಂಡ, ತಾಲೂಕು ಮಟ್ಟದ ಕಾರ್ಯಕ್ರಮಗಳಿಗೆ ಗರಿಷ್ಠ ಎರಡು ಕಲಾತಂಡ, ಜಿಲ್ಲಾಮಟ್ಟದ ಕಾರ್ಯಕ್ರಮಗಳಿಗೆ ಗರಿಷ್ಠ ಮೂರು ಕಲಾತಂಡ ಹಾಗೂ ರಾಜ್ಯಮಟ್ಟದ ಕಾರ್ಯಕ್ರಮಗಳಿಗೆ ಗರಿಷ್ಠ ಐದು ಕಲಾತಂಡಗಳನ್ನು ಕಾರ್ಯಕ್ರಮದ ಸ್ವರೂಪ ಮತ್ತು ಮಹತ್ವವನ್ನು ಗಮನಿಸಿ ಸಹಾಯಕ ನಿರ್ದೇಶಕರು ಪ್ರಾಯೋಜಿಸುವುದು.

23. ಸರ್ಕಾರದ ನಿರ್ದೇಶನದಂತೆ ಅಥವಾ ಸರ್ಕಾರದ ವಿವಿಧ ಇಲಾಖೆಗಳು ಏರ್ಪಡಿಸುವ ಕಾರ್ಯಕ್ರಮಗಳಿಗೆ ವಿಶೇಷ ಸಂದರ್ಭದಲ್ಲಿ ಕಲಾವಿದರನ್ನು/ಕಲಾತಂಡಗಳನ್ನು ಪ್ರಾಯೋಜಿಸುವುದು ಹಾಗೂ ಗೌರವ ಸಂಭಾವನೆ ನಿರ್ಧರಿಸುವುದು ನಿರ್ದೇಶಕರ ವಿವೇಚನೆಗೆ ಒಳಪಟ್ಟಿರುತ್ತದೆ.

ಗ್ರಾಮೀಣ ನಾಟಕ ಪ್ರದರ್ಶನಗಳಿಗೆ ಪ್ರೋತ್ಸಾಹ

25. ಗ್ರಾಮೀಣ ಪ್ರದೇಶದ ಅಸಂಘಟಿತ ಕಲಾಸಕ್ತರು ವರ್ಷದಲ್ಲಿ ಒಂದೆರಡು ಬಾರಿ ಒಟ್ಟುಗೂಡಿ ಏರ್ಪಡಿಸುವ ಪೌರಾಣಿಕ/ಐತಿಹಾಸಿಕ/ಸಾಮಾಜಿಕ ನಾಟಕಗಳಿಗೆ ಮಾತ್ರ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಗರಿಷ್ಠ 05 ನಾಟಕಗಳಂತೆ, ಪ್ರತಿ ನಾಟಕಗಳಿಗೆ ರೂ.10,000/-ದಂತೆ ಪ್ರಾಯೋಜಿಸುವುದು.

26. ಈ ಮಾರ್ಗಸೂಚಿಗಳು ಪರಿಶಿಷ್ಟ ವರ್ಗ/ಪರಿಶಿಷ್ಟ ಪಂಗಡಗಳ ಸಂಘ-ಸಂಸ್ಥೆಗಳೂ ಸೇರಿದಂತೆ ಗಡಿನಾಡು ಹಾಗೂ ಹೊರನಾಡು ಸಂಘ-ಸಂಸ್ಥೆಗಳಿಗೂ ಸಹ ಅನ್ವಯವಾಗುತ್ತದೆ.

(ಮಲ್ಲಿಕಾರ್ಜುನ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ.